**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ (ಕೆಜಿಎಫ್ ಪೀಠ)**

**ಎಸ್.ಸಿ. ಸಂಖ್ಯೆ:94/2025**

**CW-6**
**PW-13**

| | |
|---|---|
| | **ಸಾಕ್ಷಿಯನ್ನು ದಿಃ10.02.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.** |
| **ಸಾಕ್ಷಿಯ ಹೆಸರು** | ತಿಪ್ಪಣ್ಣ |
| **ತಂದೆಯ ಹೆಸರು** | ಮುನೆಯ್ಯ |
| **ವಯಸ್ಸು** | 42 ವರ್ಷ |
| **ಉದ್ಯೋಗ** | ಸೆಂಟ್ರಿಂಗ್ ಕೆಲಸ |
| **ವಾಸಸ್ಥಳ** | ಕದಿರೇಗೌಡನಕೋಟೆ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ-

ನನಗೆ ಚಾಸಾ-6 ಗೊತ್ತು. ನನಗೆ ಈಗ ತೋರಿಸುತ್ತಿರುವ ಕೃತ್ಯ ನಡೆದ ಸ್ಥಳದ ಪಂಚನಾಮೆಯಲ್ಲಿರುವ ಸಹಿ ನನ್ನದು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು. ಅಂದಾಜು ಒಂದು ವರ್ಷದ ಹಿಂದೆ ನಾನು ಅರೋಪಿಯ ಮನೆಯ ಬಳಿ ಸದರಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಪೊಲೀಸರು ಯಾವುದೇ ಚಾಕು ಮತ್ತು ಬಟ್ಟೆಗಳನ್ನು ಚಾಕುಅಮಾನತ್ತುಪಡಿಸಿಕೊಂಡಿರುವುದಿಲ್ಲ. ಯಾವ ವಿಷಯಕ್ಕೆ ಸಂಬಂಧಪಟ್ಟಂತೆ ಪೊಲೀಸರು ಸದರಿ ಮಹಜರ್ ಗೆ ನನ್ನ ಸಹಿ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಪಿ.ಪಿ. ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಲಾಗಿ ಅನುಮತಿಯನ್ನು ನೀಡಲಾಯಿತು.)**

ಪಾಟೀ ಸವಾಲು ಮಾನ್ಯ ಪಿ.ಪಿ. ರವರಿಂದಃ-

ದಿಃ 26-12-2024 ರಂದು ಬೆಮೆಲ್ ನಗರ ಪೊಲೀಸರು 1 ನೇ ಅರೋಪಿಯ ಹೆಂಡತಿ ತ್ರಿವೇಣಿ ತನ್ನಇಬ್ಬರು ಮಕ್ಕಳಾದ ಮೌನಿಷ ಮತ್ತು ನಿತೀನ್ ರವರನ್ನು ಸೀರೆಯಿಂದ ನೇಣು ಹಾಕಿ ಸಾಯಿಸಿ ನಂತರ ತಾನು ಸಹ ಸೀರೆಯಿಂದ ನೇಣು ಹಾಕಿಕೊಂಡು ಅತ್ಮಹತ್ಯೆ ಮಾಡಿಕೊಂಡಿದ್ದ ವಿಚಾರಕ್ಕೆ ಸಂಬಂಧಪಟ್ಟಂತೆ ಪೊಲೀಸರು 1 ನೇ ಅರೋಪಿಯ ಮನೆಯ ಬಳಿ ಬಂದು ಸ್ಥಳ

ಪರಿಶೀಲನೆ ಮಾಡಿ ನಿಪಿ.1 ರಂತೆ ಬೆಳಿಗ್ಗೆ 11-45 ರಿಂದ ಮದ್ಯಾಹ್ಣ 1-15 ಗಂಟೆಯವರೆಗೆ ನಿಪಿ.1 ರಂತೆ ಮಹಜರ್ ಮಾಡಿ, ನೇಣು ಹಾಕಿಕೊಳ್ಳಲು ಉಪಯೋಗಿಸಿದ್ದ 2 ಸೀರೆಯ ತುಂಡುಗಳನ್ನು ಮತ್ತು ಒಂದು ಚಾಕುವನ್ನು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡು ಸದರಿ ನಿಪಿ.1 ವಿಷಯಗಳನ್ನು ಓದಿ ತಿಳಿಸಿ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡ 2 ಸೀರೆಯ ತುಂಡುಗಳನ್ನು ಮತ್ತು ಸದರಿ ಚಾಕುವನ್ನು ಒಂದು ಬಿಳಿಯ ಬಣ್ಣದ ಬಟ್ಟೆಯ ಬ್ಯಾಗ್ ನಲ್ಲಿ ಹಾಕಿ ಸೀಲು ಮಾಡಿ ಎಸ್ ಎಸ್ ಎಂಬ ಮೊಹರಿನಿಂದ ಸೀಲು ಮಾಡಿ, ಬಟ್ಟೆಯ ಬ್ಯಾಗ್ ಗಳ ಮೇಲೆ ಪಂಚರಾದ ನನ್ನ ಮತ್ತು ಚಾಸಾ-7 ರವರ ಸಹಿಗಳನ್ನು ಪಡೆದ ಚೀಟಿಯನ್ನು ಅಂಟಿಸಿದರು ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿದ್ದರೂ ಹಾಗೂ ನನ್ನಸಮಕ್ಷಮ ಸದರಿ ಮಹಜರ್ ಮಾಡಿದ್ದರೂ ಸಹ, ಈಗ 1 ನೇ ಅರೋಪಿಗೆ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು 1</u> <u>ನೇ ಅರೋಪಿ ಪರ ಶ್ರೀ ಎಂ.ಪಿ ವಕೀಲರಿಂದಃ-</u>**

1 ನೇ ಅರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ.

<u>ಮರುವಿಚಾರಣೆ ಇಲ್ಲ</u>

<u>ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.</u>

ಓ ಹೇ ಕೇ ಸರಿ ಇದೆ,
Sd/-

**(ಶಿವಕುಮಾರ.ಬಿ)**
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕೋಲಾರ ಕೆ.ಜಿ.ಎಫ್(ಪೀಠ)**